For more information visit
University Library Website
Web - uasbagrilibindia.org
E-mail- librarian@uasbangalore.edu.in

ಕೃಷಿ ಕೋರ್ಸ್‌ಗಳಿಗೆ ಅರ್ಜಿ ಆಹ್ವಾನ

ಬೆಂಗಳೂರು: ಬೆಂಗಳೂರಿನ ಕೃಷಿ ವಿಶ್ವವಿದ್ಯಾಲಯ 2025-26ನೇ ಶೈಕ್ಷಣಿಕ ಸಾಲಿನಲ್ಲಿ ಎರಡು ಡಿಪ್ಲೊಮಾ ಮತ್ತು ಐದು ಸರ್ಟಿಫಿಕೇಟ್ ಕೋರ್ಸ್‌ಗಳಿಗೆ ಅರ್ಜಿ ಆಹ್ವಾನಿಸಿದೆ. ಒಂದು ವರ್ಷದ ಡಿಪ್ಲೊಮಾ ಕೋರ್ಸ್‌ಗೆ 10 ಸಾವಿರ ರೂಪಾಯಿ ಶುಲ್ಕ ನಿಗದಿಪಡಿಸಲಾಗಿದ್ದು, 10ನೇ ತರಗತಿ ಪಾಸಾದವರು ಅರ್ಜಿ ಸಲ್ಲಿಸಬಹುದಾಗಿದೆ. ಒಂದು ವರ್ಷದ ಸ್ನಾತಕೋತ್ತರ ಕೋರ್ಸ್‌ಗೆ 12 ಸಾವಿರ ಶುಲ್ಕವಿದ್ದು, ಕೃಷಿ ಪದವೀಧರರು ಅರ್ಜಿ ಹಾಕಬಹುದಾಗಿದೆ. ಸರ್ಟಿಫಿಕೇಟ್ ಕೋರ್ಸ್‌ಗಳಾದ ಬೀಜೋತ್ಪಾದನೆ ತಾಂತ್ರಿಕತೆ ಮತ್ತು ಕೃಷಿಯಲ್ಲಿ ಯಂತ್ರೋಪಕರಣಗಳ ನಿರ್ವಹಣೆಗೆ 3 ಸಾವಿರ ಶುಲ್ಕವಿದ್ದು, 10ನೇ ತರಗತಿ ತೇರ್ಗಡೆ ಹೊಂದಿರುವವರು ಅರ್ಜಿ ಸಲ್ಲಿಸಬಹುದಾಗಿದೆ. ಜೇನು ಸಾಕಣೆ ಕೋರ್ಸ್ ಗೆ 3 ಸಾವಿರ ರು. ಸಮಗ್ರ ಕೃಷಿ ಕೋರ್ಸ್‌ಗೆ 1.5 ಸಾವಿರ ಶುಲ್ಕವಿದ್ದು, 7ನೇ ತರಗತಿ ಪಾಸಾದವರು ಅರ್ಜಿ ಸಲ್ಲಿಸಬಹುದಾಗಿದೆ. ಸಾವಯವ ಕೃಷಿ (ಅಂಚೆ ಶಿಕ್ಷಣ) ಕೋರ್ಸ್‌ಗೆ ಶುಲ್ಕ 200 ರು., ಓದು ಬರಹ ಬಲ್ಲವರು ಅರ್ಜಿ ನೀಡಬಹುದಾಗಿದೆ. ಕೃಷಿ ವಿಜ್ಞಾನ ಕೇಂದ್ರಗಳಾದ ರಾಮನಗರ, ಚಾಮರಾಜನಗರ, ಚಿಕ್ಕಬಳ್ಳಾಪುರ, ಹಾಸನ, ಮಂಡ್ಯ, ಬೆಂಗಳೂರು ಗ್ರಾ.ಮಾಂ ಮತ್ತು ತುಮಕೂರು ಜಿಲ್ಲೆಗಳಲ್ಲಿ ಹಾಗೂ ವಿಸ್ತರಣಾ ಶಿಕ್ಷಣ ಘಟಕ, ಮೈಸೂರಿನಲ್ಲಿ ಅರ್ಜಿ ಪಡೆಯಬಹುದಾಗಿದೆ. ಬೆಂಗಳೂರು ಕೃಷಿ ವಿವಿ ಜಾಲತಾಣ www.uasbangalore.edu.in ರಿಂದ ಕೂಡ ಅರ್ಜಿ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಭರ್ತಿ ಮಾಡಿದ ಅರ್ಜಿಗಳನ್ನು ನಿಗದಿತ ಕೋರ್ಸ್ ಶುಲ್ಕವನ್ನು ಡಿಡಿ ಮೂಲಕ ಪಡೆದು ಏ. 12 ಮಧ್ಯಾಹ್ನ 12.30ರ ಒಳಗೆ ಸಂಯೋಜಕರು ಮತ್ತು ಮುಖ್ಯಸ್ಥರು, ದೂರ ಶಿಕ್ಷಣ ಘಟಕ, ರೈತ ತರಬೇತಿ ಸಂಸ್ಥೆ, ವಿಸ್ತರಣಾ ನಿರ್ದೇಶನಾಲಯ, ಕೃಷಿ ವಿಶ್ವವಿದ್ಯಾನಿಲಯ ಜಿಕೆವಿಕೆ, ಬೆಂಗಳೂರು -560065 ಅವರಿಗೆ ಸಲ್ಲಿಸಲು ಪ್ರಕಟಣೆ ತಿಳಿಸಿದೆ.

Viswavani pg 02

S-karnataka pg 05

ಕುರಿಗಾಹಿಗಳ ರಕ್ಷಣೆಗೆ ಪ್ರತ್ಯೇಕ ಕಾನೂನು ರಚನೆಗೆ ಚಿಂತನೆ

ಬೆಂಗಳೂರು: ಇತ್ತೀಚೆಗೆ ರಾಜ್ಯದಲ್ಲಿ ಕುರಿಗಾಹಿಗಳ ಮೇಲೆ ದೌರ್ಜನ್ಯ ಹಾಗೂ ಹಲ್ಲೆ ಕೊಲೆ ಪ್ರಕರಣಗಳು ಹೆಚ್ಚುತ್ತಿವೆ ಈ ನೆಲೆಯಲ್ಲಿ ಕುರಿಗಾಹಿಗಳ ರಕ್ಷಣೆಗಾಗಿ ರಾಜ್ಯ ಸರ್ಕಾರ ಮಹತ್ವದ ನಿರ್ಧಾರ ಕೈಗೊಂಡಿದ್ದು ಕುರಿಗಾಹಿಗಳ ರಕ್ಷಣೆಗಾಗಿ ಪ್ರತ್ಯೇಕ ಕಾನೂನು ರಚನೆ ಮಾಡಲು ಇದೀಗ ರಾಜ್ಯ ಸರ್ಕಾರ ಚಿಂತನೆ ನಡೆಸುತ್ತಿದೆ.ಕುರಿಗಾಹಿಗಳ ಮೇಲಿನ ದೌರ್ಜನ್ಯ ತಡೆಗಾಗಿ ವಿಧೇಯಕ ಮಂಡನೆಗೆ ರಾಜ್ಯ ಸರ್ಕಾರ ಸಿದ್ಧತೆ ಮಾಡಿಕೊಂಡಿದೆ. ಸಾಂಪ್ರದಾಯಿಕ ಕುರಿಗಾಹಿಗಳ ರಕ್ಷಣೆಗೆ ಪ್ರತ್ಯೇಕ ವಿಧೇಯಕ ತರಲು ಚಿಂತನೆ ನಡೆಸಲಾಗುತ್ತಿದೆ. ಪಶು ಸಂಗೋಪನ ಇಲಾಖೆಯಿಂದ ವಿಧೇಯಕ ಮಂಡನೆಗೆ ತಯಾರಿ ಮಾಡಲಾಗುತ್ತಿದ್ದು, ಸಾಂಪ್ರದಾಯಿಕ ವಲಸೆ ಕುರಿಗಾಹಿಗಳ ಮೇಲೆ ದೌರ್ಜನ್ಯ ಹೆಚ್ಚುತ್ತಿದೆ. ವಲಸೆ ಕುರಿಗಾಹಿಗಳ ಆಸ್ತಿಪಾಸ್ತಿಗಳ ಒತ್ತುವರಿ ಕೂಡ ಹೆಚ್ಚುತ್ತಿದೆ. ಈ ಹಿನ್ನೆಲೆಯಲ್ಲಿ ಕುರಿಗಾಹಿಗಳ ರಕ್ಷಣೆಗೆ ಪ್ರತ್ಯೇಕ ಕಾನೂನು ರಚಿಸಲು ಚಿಂತನೆ ನಡೆಸುತ್ತಿದೆ.ಇತ್ತೀಚೆಗಷ್ಟೇ ಬಾಗಲಕೋಟೆ ಜಿಲ್ಲೆಯ ಕೆರೂರು ಗ್ರಾಮದ ಬಳಿ, ರಾತ್ರಿಯ ವೇಳೆ ಕುರಿಗಳನ್ನು ಕಳ್ಳತನ ಮಾಡಲು ದುಷ್ಕರ್ಮಿಗಳು ಬಂದಿದ್ದು, ಈ ವೇಳೆ ಕುರಿಗಾಹಿಯನ್ನು ಓರ್ವ ಹಿಡಿದಾಗ ಉಳಿದವರು ಬಂದು ಆತನ ಮೇಲೆ ಹಲ್ಲೆ ನಡೆಸಿ ಕೊಡಲಿಯಿಂದ ಕೊಚ್ಚಿ ಭೀಕವಾಗಿ ಕೊಲೆ ಮಾಡಿದ್ದರು. ಹಾಗಾಗಿ ಕುರಿಗಾಹಿಗಳ ರಕ್ಷಣೆಗಾಗಿ ಪ್ರತ್ಯೇಕ ವಿಧೇಯಕ ಮಂಡನೆಗೆ ರಾಜ್ಯ ಸರ್ಕಾರ ಚಿಂತನೆ ನಡೆಸಿದೆ.

Miyazaki, priciest of mango varieties at ₹2k per kg, is a luxury

Farmers Across India Are Beginning To Cultivate The Japanese Speciality

Pics courtesy: Rudra Agro Nursery

Priya.Kothari@timesofindia.com

A flaming red mango is slowly finding growers in the Indian market, never mind that it costs Rs 2.70 lakh per kg in the international market and sells at over Rs 2,000 per kg in the country. So, buyers would be few and far between.

From dashari to langda to malda and alphonso, in a country where the mango's allure is phenomenal as are its varieties, the Miyazaki mango originally from Japan, is manna from heaven.

Unlike regular green or yellow mangoes, its skin turns from purple to a flaming red when ripe.

Experts say that a few bites of this unusual mango could do wonders to your health. It can help boost your immune function, improve iron absorption, and aid eye health.

INDIAN SOIL JUST RIGHT

- Miyazaki mangoes got their name from a city in Japan where they are grown
- Miyazaki mangoes are rich in antioxidants, beta-carotene, folic acid, Vitamin A, Vitamin C
- Each mango typically weighs about **300-350g**





- These mangoes have still not made it to local fruit markets as commercial production has still not begun
- **However, farmers feel that over the next few years, Miyazaki could become localised as parts of India have the perfect growing conditions**
- But, at present, it truly has become a symbol of luxury, prestige and desirability

TIMES *Special*

The fruit is also packed with potassium and magnesium, which also makes it one of the most expensive mangoes in the world.

Balasaheb Dhakane, owner of Rudra Agro Nursery in Alandi near Pune said, "They are not grown in large quantities in India, but as awareness is increasing so is the demand. We get calls from all over India – especially from the South and Gujarat for Miyazaki saplings."

While some nurseries in and around Pune cater to the demand for Miyazaki, a large chunk of nurseries are located in West Bengal.

Nizam-ul-Haq, who runs Bengal Traditional Nursery in Kolkata, said he sells 2,000-3,000 Miyazaki saplings every month.

"Most of the mother plants come from Bangladesh and then we create saplings from the seeds of these fruits," he said.

Manish Deshwal, who runs Kisan Farming in UP's Meerut, said he gets big orders from farmers in different parts of the country, who want to experiment with Miyazaki mangoes. "Our customers who approach us usually want over 500 saplings," he said.

Konkan farmer Murli, who has a mango farm, is now experimenting with the Miyazaki variety. "This is my first attempt at growing it. I have heard that the plant is extremely prone to pests and diseases so it has be monitored regularly. It will take some time before the saplings start fruiting," he said.

The saplings are expensive to buy. A three to four ft sapling could cost in the range of Rs 850–Rs 1,200 in Maharashtra. Prices are lower in Kolkata.

The yield per tree is not as high as a normal mango tree, just one-third. The harvest season is summer, with produce likely to peak in April.

Farmers are aware that Miyazaki mangoes will not fetch them many customers as the prices are exorbitant in India. In Japan, these mangoes are usually bought in auctions and are used for gifting.

"These mangoes are grown in greenhouses in Japan and in temperature controlled environments. We place a protective cover on the mangoes and tie them to the stick so that they don't fall on the ground and get damaged," Dhakane said.

Wagholi resident Shyamali Sanyal recently placed an order for Miyazaki saplings from a Kolkata-based nursery. "I purchased around 17 plants from the Kolkata nursery. The Miyazaki sapling cost me around Rs 300 for a three feet sapling. I have heard this plant is prone to diseases so I will have to be careful with it," she said.

Times of Ind pg 12

More Bengalureans are looking at ways to co-exist with honey bees, one of the important and life-sustaining pollinators of mother nature

A HIVE OUTSIDE? Bee calm and get going

Gokul.MG@timesofindia.com

It's March, that time of the year when jacarandas and tabebuias and other myriad flora envelop Bengaluru in bursts of colours as the city warms up towards summer. March-April is also when honey bees swarm the city's vibrant gardens of all sizes, busy foraging and hive-building, which also bring these tiny pollinators into close encounters with humans. Often, the knee-jerk reaction to the hives that appear overnight is extermination, but a conscientious bunch of Bengalureans is trying to reverse this alarming trend by calmly looking for sustainable options.

'A live exhibition outside my window'

When a swarm of bees began building a hive outside her window in Feb, Yasmeen Iqbal, a communications professional working with a multinational consulting firm, decided to just let them be. "There was a very large hive that got formed outside one of my bedroom windows. And because I had observed other people mentioning in the apartment group that bees are not harmful, let them be etc, I reached out to a few others who had tried to do their best in the past to save bees," says Yasmeen, who lives in the southern part of the city.

"For several weeks, I only had to be okay with not opening the window, but otherwise it was like you have this live exhibition outside your window that you can observe. It's beautiful," she says. Yasmeen, now a part of a group of five bee volunteers in her community, had to get the hive safely relocated since the apartment is undergoing some maintenance activity. She hired a person to remove the hive safely, but to her utter shock he disturbed and cut the hive to harvest the honey. "We then decided not to let him touch other few hives that needed relocation."





ROOTING FOR THE BEES: (Above) Faisal safely removes a beehive before relocating it to a place away from human habitation; (left) a hive after bees were partly smoked out; (top right) a beehive at an apartment building

Why relocation is the right alternative

Traditionally, when a bee colony takes up residence in an apartment balcony or office building, pest control services are called in to smoke or fog them out. But what many don't realize is that these methods are not only cruel but also hazardous — fogging and using pesticides indiscriminately kill bees, and when synthetic materials like plastics are burned in the process, toxic fumes are released into the environment.

Apoorva B, who works with a bee conservation NGO, argues that relocation is a far superior alternative. "Relocating bees preserves their lives while preventing harm to humans. But without an organised approach, untrained individuals may exploit the process," he says. Ethical relocation ensures that bees can continue their vital role in pollination while mitigating risks for humans. However, despite its clear benefits, relocation remains an underutilised option, mainly due to lack of structured efforts from the authorities.

'Bees are not pests'

Roopa Vaidya, who moved to Bengaluru from the US in 2022, says she was initially mortified to notice how nonchalant people were in the city about bees. "In the West, people are fighting hard to conserve bees, while here, we treat them like pests. Without pollinators, we're in serious trouble," she says. A resident of RR Nagar, Roopa persistently campaigned against use of pesticides against bees in her apartment complex, and has successfully helped her apartment management to transition towards safe removal of beehives.

Roopa says she sees a disturbing pattern here: "Even snakes were considered a threat in our apartment, and the immediate solution was elimination. We have become barbaric out of fear and ignorance! We once coexisted with wildlife, but now we wipe it out at the first inconvenience." She also managed to push for snake catchers to be included in her apartment's emergency contacts.

Need bee-specific laws

While India has laws protecting many wildlife species, bees remain largely overlooked, says Apoorva, highlighting a legal loophole. "The absence of specific laws to protect bees creates a major gap in bee conservation. This allows unethical operators to mislead people with dubious hive removal services while profiting from adulterated honey sales."

> Typically, honey bees stay in one location for three to four months, moving based on temperature and flora availability. Spring is a crucial season for them. During colder months, many bees migrate from forests to urban areas like Bengaluru in search of warmth and food...
>
> Bengaluru must shift from viewing bees as a menace to understanding their indispensable role in our ecosystem
>
> **KT Vijayakumar** | SCIENTIST & ASSISTANT PROFESSOR, DEPT OF APICULTURE, UNIVERSITY OF AGRICULTURAL SCIENCES



An urgent need for sustainable solutions

Bee relocation is a delicate art that requires expertise. When done correctly, problematic hives are identified, carefully extracted, and transported to safer areas far from human settlements. However, improper techniques—such as using plastics or incense to smoke out bees—can be just as harmful as extermination. Scaling up relocation efforts across Bengaluru is challenging without proper organisation and govt support, but the stakes couldn't be higher.

The consequences of bee decline are severe. As primary pollinators, bees are crucial for biodiversity and food security. Their disappearance could trigger a domino effect—lower crop yields, higher food prices, and disruptions in ecosystems that rely on pollinated plants. Farmers and agricultural industries, in particular, stand to lose significantly. According to an informal survey cited by Apoorva, hundreds of bee colonies are eliminated daily in Bengaluru. This alarming statistic underscores the urgent need for conservation strategies that focus on coexistence rather than destruction.

Organisations like The Hive, where Apoorva is actively involved, advocate for a coexistence model instead of mass removals. Their efforts include community education, promoting relocation over extermination, and designing urban spaces that can accommodate bee populations safely.

> Once a year, Bengaluru's Apis dorsata colonies leave their nests voluntarily. The colonies perform seasonal migrations over large distances (up to at least 200 km) like bird or butterfly migrations
> – Pollinators In The Urban Age, Sebastian Walter and Axel Brockmann, Heinrich-Böll-Stiftung

'It's critical to conserve species in urban areas'

KT Vijayakumar, scientist and assistant professor at department of apiculture in Bengaluru-based University of Agricultural sciences (UAS), has been training people in bee relocation and beekeeping. He explains that certain honey bee species found in urban areas are highly efficient pollinators due to their larger body size and pollen-collecting hairs. "There aren't many domestic bee species in urban settings, making it critical to conserve wild populations. Instead of extermination, safer removal techniques should be prioritised," he says.

Bees are migratory, searching for warmth and food

"Bees move to different regions to exploit available flora essential for their survival and pollination," says Vijayakumar, spotlighting their vital role in urban gardening and agriculture. "Typically, honey bees stay in one location for three to four months, moving based on temperature and flora availability. Spring is a crucial season for them, as blooming flowers provide essential resources. Interestingly, during colder months like November and December, many bees migrate from forests to urban areas like Bengaluru in search of warmth and food."

Bee rescuers fight against pesticides, scams

Faisal, a city-based bee removal expert, has been working to counter unethical hive removal practices. Instead of using pesticides, he employs a simple yet effective method—calming bees with a bit of smoke using coconut husk or dry leaves before gently removing the hive. Once the hive is relocated, he applies a natural paste that encourages the remaining bees to find a new home.



Wild bees choose elevated sites like trees to build hives as they offer protection against ground-based predators that might otherwise disturb or destroy their colonies. In urban areas, where trees disappear rapidly, they also opt for tall buildings. In Bengaluru, you can even spot beehives right under metro viaducts. "Tall buildings allow bees get a preview of the availability of flowers to collect nectar. To prevent bee attacks, avoid passing by their hive with strong perfumes, deodorants, or when smoking tobacco, as these scents can agitate them," says Faisal.

On an average, Faisal handles daily three to four hive removal inquiries from Bengaluru and Mysuru regions. While noting that many residents still resort to extermination, he says awareness around sustainable handling of bee hives is growing. More apartment complexes are now rejecting pest control services that kill bees and opting for humane alternatives, he says. "Education is crucial in helping residents understand the benefits of safely relocating bees rather than exterminating them." Faisal says he is worried about the lack of professionals with proper knowledge of the ecological impact of bee destruction.

He warns against "free" bee removal services because the hives are subsequently used to harvest raw honey for adulteration. "The responsibility does not end with calling in a safe service. We need to ensure that the process is done ethically," he says. He notes that such scams peak especially during the offseason when honey is scarce, allowing fraudsters to pass off their impure products as genuine.

After her bitter experience, Yasmeen and fellow volunteers are taking Faisal's help to safely remove and relocate all the hives that are coming up at their apartment complex.

The city begins to buzz around bees

With an increase in urban gardening initiatives and the need for pollinators in these settings, bees are becoming more important than ever. "If they're not causing direct harm, the best course of action is to let them be," says professor Vijayakumar, who adds that awareness is crucial to achieve this state of mind.

The professor also notes that there is an increasing trend of people becoming beekeepers. Training programmes, initiated by experts like Vijayakumar under the leadership of University of Agricultural Sciences, are set to take place in the coming months.

WORLD BEE DAY | MAY 20

Being observed to raise awareness on the essential role bees and other pollinators play. More than 200,000 animal species are pollinators, the vast majority of which are wild, including butterflies, birds, bats and more than 20,000 bee species

Times of Ind Pg 02

ಬಿಸಿಲಿನ ಧಗೆ: ಮಾವಿನ ಹೀಚು ಧರೆಗೆ

ಬೆಂಗಳೂರು: ಅಧಿಕ ತಾಪಮಾನದ ಪರಿಣಾಮ ಈ ಬಾರಿ ಮಾವು ಇಳುವರಿ ಕುಸಿಯಲಿದೆ. ಇದರಿಂದ ಮಾವು ಬೆಳೆಗಾರರು ತತ್ತರಿಸುವ ಸಂಭವ ಎದುರಾಗಿದೆ.

ಮಾವು ಬೆಳೆಯುವ ಪ್ರದೇಶಗಳಲ್ಲಿ ತಾಪಮಾನ 37ರಿಂದ 40 ಡಿಗ್ರಿ ಸೆಲ್ಸಿಯಸ್ ತಲುಪಿರುವುದರಿಂದ ಹೂ ಹಾಗೂ ಹೀಚು ಅಧಿಕವಾಗಿ ಉದುರಿದೆ. ರೈತರು ಮಾವಿನ ಹೀಚು ಉಳಿಸಿಕೊಳ್ಳಲು ಗಿಡಗಳಿಗೆ ತುಂತುರು ವ್ಯವಸ್ಥೆಯಲ್ಲಿ ನೀರು ಹರಿಸಲು ಮುಂದಾಗಿದ್ದಾರೆ. ಇನ್ನು ಕೆಲವರು ಟ್ರ್ಯಾಕ್ಟರ್ ಮೂಲಕ ಗಿಡಗಳಿಗೆ ನೀರು ಕೊಡುತ್ತಿದ್ದಾರೆ.

ಮಾವು ಬೆಳೆಗಾರರಲ್ಲಿ ಆತಂಕ

ಅಧಿಕ ಮಾವು ಬೆಳೆಯುವ ಜಿಲ್ಲೆಗಳಾದ ಕೋಲಾರ, ರಾಮನಗರ, ಚಿಕ್ಕಬಳ್ಳಾಪುರ, ತುಮಕೂರು, ಬೆಳಗಾವಿಯಲ್ಲಿ ತಾಪಮಾನ 38 ಡಿಗ್ರಿ ಸೆಲ್ಸಿಯಸ್ ಮೀರಿದೆ. ಇದರಿಂದ ಹೀಚುಗಳು ತೀವ್ರವಾಗಿ ಉದುರುತ್ತಿವೆ. ಕಳೆದ ಮೂರ್ನಾಲ್ಕು ವರ್ಷಗಳಿಂದ ಬೆಳೆಗಾರರು ಇಳುವರಿ ಕುಸಿತದಿಂದ ಜರ್ಜರಿತಗೊಂಡಿದ್ದಾರೆ. ಮೂರು ವರ್ಷಗಳಿಂದ ತಾಪಮಾನ ಏರಿಕೆಯಾಗುತ್ತಲೇ ಇದೆ. ಹೂ ಹೀಚಾಗಿ, ಹೀಚು ಕಾಯಿಯಾಗಿ ನಂತರ ಹಣ್ಣಾಗುವಷ್ಟರಲ್ಲಿ ತಾಪಮಾನದಿಂದ ಶೇ.40ರಷ್ಟು ಇಳುವರಿ ಕುಸಿತವಾಗುತ್ತಿದೆ. ರೈತರಿಗೆ ಶೇ. 35ರಿಂದ 45ರಷ್ಟು ಮಾತ್ರ ಫಸಲು ದೊರೆಯುತ್ತಿದೆ. ಡಿಸೆಂಬರ್‌ನಲ್ಲಿ ಮಾವಿನಲ್ಲಿ ಹೂ ಆರಂಭವಾಗುತ್ತದೆ. ಫೆಬ್ರವರಿಯಲ್ಲಿ ಹೂ ಹೀಚಾಗುತ್ತದೆ. ಈ ಅವಧಿಯಲ್ಲಿ ತಾಪಮಾನ ಅಧಿಕವಾಗಿದ್ದರೆ ಹೀಚು ಉದುರುತ್ತದೆ. ಬೆಲೆ ಅಧಿಕ: ಮಾವು ಇಳುವರಿ ಕುಸಿತವಾಗುತ್ತಿರುವುದರಿಂದ ಮಾರುಕಟ್ಟೆಯಲ್ಲಿ ಮಾವು ಬೆಲೆ ಅಧಿಕವಾಗಿದೆ. ಅಲ್ಲದೆ ರಾಜ್ಯದಿಂದ ನೆರೆ ರಾಜ್ಯ ಹಾಗೂ ವಿದೇಶಗಳಿಗೂ ಮಾವು ರಫ್ತಾಗುತ್ತದೆ. ಇಳುವರಿ ಕುಸಿತದಿಂದ ವಿದೇಶಕ್ಕೆ ಪೂರೈಕೆಯಾಗುವ ಮಾವಿನ ಮೇಲೂ ಪರಿಣಾಮ ಬೀರಿದೆ.



> ತಾಪಮಾನ ಅಧಿಕವಾಗಿರುವುದರಿಂದ ಮಾವಿನ ಗಿಡಗಳಿಗೆ ಟ್ಯಾಂಕರ್ ಮೂಲಕ ನೀರು ನೀಡಿ ಫಸಲು ಉಳಿಸಿಕೊಳ್ಳುವ ಕೆಲಸವನ್ನು ಬೆಳೆಗಾರರು ಮಾಡಬೇಕು.
> ■ ಡಾ.ಎಸ್.ವಿ. ಹಿತ್ತಲಮನಿ. ತೋಟಗಾರಿಕೆ ಇಲಾಖೆ ನಿವೃತ್ತ ನಿರ್ದೇಶಕ.

> ಮಳೆ ವ್ಯತ್ಯಾಸ ಕೂಡ ಮಾವಿನ ಇಳುವರಿ ಮೇಲೆ ಪರಿಣಾಮ ಬೀರುತ್ತಿದೆ. ಈ ಬಾರಿ ಹೂ ಬಿಡುವ ಸಮಯದಲ್ಲೇ ಮಾವು ಚಿಗುರಲು ಆರಂಭವಾಗಿದೆ. ಇದು ಕೂಡ ಇಳುವರಿ ಕುಸಿತಕ್ಕೆ ಕಾರಣವಾಗಲಿದೆ.
> ■ ವೇಣುಗೋಪಾಲ, ಮಾವು ಬೆಳೆಗಾರ ಶ್ರೀನಿವಾಸಪುರ ತಾಲೂಕು

ಕೋಲಾರದಲ್ಲಿ ಅತೀ ಹೆಚ್ಚು ಮಾವು ಬೆಳೆ

ರಾಜ್ಯದಲ್ಲಿ ಅತೀ ಹೆಚ್ಚು ಮಾವು ಬೆಳೆಯುವ ಜಿಲ್ಲೆ ಕೋಲಾರ. ಇಲ್ಲಿ 40 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ಮಾವು ಬೆಳೆಯಲಾಗುತ್ತಿದೆ. ನಂತರದ ಸ್ಥಾನ ರಾಮನಗರ ಜಿಲ್ಲೆ. ಇಲ್ಲಿ 25 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ಮಾವು ಇದೆ. ಉಳಿದಂತೆ ಧಾರವಾಡ, ಹಾವೇರಿ, ಬೆಳಗಾವಿ, ಶಿವಮೊಗ್ಗ, ಚಿಕ್ಕಬಳ್ಳಾಪುರ, ತುಮಕೂರು, ಧಾರವಾಡ, ಗದಗ, ಬೆಳಗಾವಿ ಹಾಗೂ ಕೊಡಗು ಜಿಲ್ಲೆಯಲ್ಲಿ ಅಲ್ಪ ಪ್ರಮಾಣದಲ್ಲಿ ಮಾವು ಬೆಳೆ ಇದೆ. ಕೋಲಾರ ಜಿಲ್ಲೆಯ ಶ್ರೀನಿವಾಸಪುರ ತಾಲೂಕಿನಲ್ಲಿ ಅತೀ ಹೆಚ್ಚು ಮಾವು ಬೆಳೆಯಲಾಗುತ್ತಿದೆ. ರಾಮನಗರ ಜಿಲ್ಲೆಯಲ್ಲಿ ರಾಮನಗರ ತಾಲೂಕಿನಲ್ಲಿ ಹೆಚ್ಚು ಮಾವು ಬೆಳೆಯಲಾಗುತ್ತಿದೆ.

S-karnataka pg 05

ಮಣ್ಣು ಪರೀಕ್ಷೆ ಇನ್ನು ಡಿಜಿಟಲ್: ವರದಿಗೆ ತಿಂಗಳುಗಟ್ಟಲೇ ಕೃಷಿಕರು ಕಾಯಬೇಕಿಲ್ಲ!

ಮಣ್ಣಿನ ಡಿಜಿಟಲ್ ನಕ್ಷೆ ಸಿದ್ಧಪಡಿಸಿದ ರಾಷ್ಟ್ರೀಯ ಮಣ್ಣಿನ ಸಮೀಕ್ಷೆ ಮತ್ತು ಭೂ ಬಳಕೆ ಯೋಜನೆ ಬ್ಯೂರೋ । ಇದಕ್ಕೆ ರಾಜ್ಯದ 5174 ಪ್ರೊಫೈಲ್ ಪಾಯಿಂಟ್ ಡೇಟಾ ಬಳಕೆ

■ ಸುಚೇತಾ ಹೆಗಡೆ

ಉದಯವಾಣಿ ಸಮಾಚಾರ

ಬೆಂಗಳೂರು: ಮಣ್ಣುಪರೀಕ್ಷೆ ಮಾಡಿಸಲು ಹತ್ತಿರದಲ್ಲಿ ಮಣ್ಣು ಪರೀಕ್ಷಾ ಕೇಂದ್ರವಿಲ್ಲವೆಂದು ಯೋಚಿಸುತ್ತಿದ್ದಿರಾ? ಅಥವಾ ಮಣ್ಣಿನ ಪರೀಕ್ಷೆ ಮಾಡಿಸಿ ಮಾಹಿತಿ ಪಡೆಯುಷ್ಟು ಸಮಯವಿಲ್ಲವೆಂದು ಸುಮ್ಮನಾಗಿದ್ದೀರಾ? ಹಾಗಿದ್ದಲ್ಲಿ ಈ ಮಾಹಿತಿ ನಿಮಗೆ ಉಪಯುಕ್ತವಾಗಬಹುದು.

ಹೌದು. ಭಾರತೀಯ ಕೃಷಿ ಸಂಶೋಧನಾ ಮಂಡಳಿಯ ರಾಷ್ಟ್ರೀಯ ಮಣ್ಣಿನ ಸಮೀಕ್ಷೆ ಮತ್ತು ಭೂ ಬಳಕೆ ಯೋಜನೆ ಬ್ಯೂರೋ ಇದಕ್ಕೆ ಪರಿಹಾರ ಕಂಡುಹಿಡಿದಿದೆ. ಈಗಾಗಲೇ ಲಭ್ಯವಿರುವ ಮಣ್ಣು ಪರೀಕ್ಷೆಗಳ ಮಾಹಿತಿಯನ್ನು ಬಳಸಿಕೊಂಡು ರಾಜ್ಯದ 'ಡಿಜಿಟಲ್ ಮಣ್ಣಿನ ನಕ್ಷೆ'ಯನ್ನು ತಯಾರಿಸಿದೆ.

ಈ ಮೂಲಕ ಮಣ್ಣಿನ ಗುಣಲಕ್ಷಣಗಳನ್ನು ತಿಳಿದುಕೊಳ್ಳುವ ಕಾರ್ಯಕ್ಕೆ ವೇಗ ದೊರೆತಂತಾಗಿದೆ. ಡಿಜಿಟಲ್ ಮಣ್ಣಿನ ನಕ್ಷೆಯಿಂದ ಮಣ್ಣಿನ ಆಳ, ಮಣ್ಣಿನ ರಚನೆ, ಸಾವಯವ ಇಂಗಾಲ, ಮಣ್ಣಿನ ಪಿಎಚ್ ಮಟ್ಟ, ಕ್ಷೇತ್ರ ಸಾಮರ್ಥ್ಯವನ್ನು ತಿಳಿಯಬಹುದಾಗಿದೆ. ಇದನ್ನೇ ಬಳಸಿಕೊಂಡು, ಸಸ್ಯಗಳಿಗೆ ಮಣ್ಣಿನಿಂದ ನೀರು



ಲಭ್ಯವಾಗದ ಸ್ಥಳಗಳನ್ನೂ ಗುರುತಿಸಲಾಗಿದೆ. ಮಣ್ಣಿನ ಆಳದ ನಕ್ಷೆಗಾಗಿ, ರಾಜ್ಯದ ಸುಮಾರು 5174 ಪ್ರೊಫೈಲ್ ಪಾಯಿಂಟ್ ಡೇಟಾವನ್ನು ಬಳಸಲಾಗಿದೆ. ಮಣ್ಣಿನ ಪಿಎಚ್ ಮತ್ತು ಸಾವಯವ ಇಂಗಾಲವನ್ನು ತಿಳಿಯಲು 1,46,044 ಕ್ಷೇತ್ರಗಳ ಮಾಹಿತಿಯನ್ನು ಬಳಸಿಕೊಳ್ಳಲಾಗಿದೆ. ಮೇಲ್ಭಾಗದ ಮಣ್ಣಿನ ವಿನ್ಯಾಸ ವರ್ಗವನ್ನು ನಕ್ಷೆ ಮಾಡಲು ಆಯ್ದ ಅರಣ್ಯ ವರ್ಗೀಕರಣದ ಆಂಕಿ-ಅಂಶಗಳನ್ನು ಬಳಸಲಾಗಿದೆ.

ಇದರೊಂದಿಗೆ ಮರಳು, ಹೂಳು, ಜೇಡಿಮಣ್ಣು ಮತ್ತು ಸಿಇಸಿಯಂತಹ ಮಣ್ಣಿನ ಗುಣಲಕ್ಷಣಗಳನ್ನು ಗ್ಲೋಬಲ್ ಸಾಯಿಲ್ ಮ್ಯಾಪ್ ಪ್ರಕಾರ ಮಾಡಲಾಗಿದ್ದು, ಗದಗ ಮತ್ತು ಕೊಪ್ಪಳ ಜಿಲ್ಲೆಗಳಿಗೆ 200 ಸೆಂ.ಮೀ

ಏನಿದರ ಉಪಯೋಗ?

- ಡಿಜಿಟಲ್ ಮಣ್ಣಿನ ಪರೀಕ್ಷೆಗೆ ತೆಗೆದುಕೊಳ್ಳುವ ಸಮಯ ಕಡಿಮೆ
- ಪರೀಕ್ಷಾ ಕೇಂದ್ರ ಹಾಗೂ ರೈತರಿಬ್ಬರಿಗೂ ತಗಲುವ ವೆಚ್ಚ ಕಡಿಮೆ
- ಮಣ್ಣಿನ ಪರೀಕ್ಷೆಗೆ ಯಾವುದೇ ಮಣ್ಣಿನ ಮಾದರಿಗಳ ಅವಶ್ಯಕತೆ ಇರುವುದಿಲ್ಲ
- ಮಣ್ಣಿ ಪರೀಕ್ಷಾ ಕೇಂದ್ರಕ್ಕೆ ಆಲೆದಾಡುವ ಅವಶ್ಯಕತೆ ಇರುವುದಿಲ್ಲ
- ಜಲಾನಯನ ನಿರ್ವಹಣೆಗೂ ಉಪಯೋಗಕಾರಿ

ಲಭ್ಯವಿರುವ ಮಾಹಿತಿಗಳು ಬದಲಾಗುವುದಿಲ್ಲವೇ?

ಮಣ್ಣಿನ ರಚನೆ, ಗುಣಧರ್ಮಗಳು ದಿನೇ ದಿನೇ ಬದಲಾಗದೇ ಇರುವುದರಿಂದ ಮೂರರಿಂದ ನಾಲ್ಕು ದಶಕಗಳವರೆಗೆ ಈ ಮಾಹಿತಿಗಳು ಬದಲಾಗುವುದಿಲ್ಲ. ಮಣ್ಣಿನ ಮೇಲೆ ಮಾನವನ ಭೌತಿಕ ಹಸ್ತಕ್ಷೇಪವಿಲ್ಲದ ಪ್ರದೇಶದಲ್ಲಿ ಇನ್ನೂ ಹೆಚ್ಚಿನ ಕಾಲ ಈ ಮಾಹಿತಿ ಉಪಯುಕ್ತವಾಗಿರುತ್ತದೆ. ಈ ಪರೀಕ್ಷೆಯು ನಿರ್ದಿಷ್ಟ ಸ್ಥಳದ ಮಣ್ಣಿನ ಪರೀಕ್ಷೆಯಷ್ಟು ನಿಖರವಾಗಿಲ್ಲದೇ ಹೋದರೂ, ರೈತರಿಗೆ ಹಾಗೂ ಮಣ್ಣಿನ ಸಾಮಾನ್ಯ ಗುಣಲಕ್ಷಣ ತಿಳಿಯಬೇಕಿರುವವರಿಗೆ ಯಾವುದೇ ತೊಂದರೆಯಾಗುವುದಿಲ್ಲ ಎನ್ನುತ್ತಾರೆ ವಿಜ್ಞಾನಿಗಳು.

> ಡಿಜಿಟಲ್ ಮಣ್ಣಿನ ನಕ್ಷೆಯಿಂದ ಗ್ರಾಮೀಣ ಪ್ರದೇಶಗಳ ಮಣ್ಣಿನ ಕಣಗಳ ಸಂಯೋಜನೆ, ಆಳದ ರೀತಿಗಳ ಬಗ್ಗೆ ಮಾಹಿತಿ ನೀಡಬಹುದು. ಈ ಮಾಹಿತಿಯು ಕೃಷಿಗೆ ಅನುಕೂಲವಾಗುತ್ತದೆ.
> ● ಡಾ.ವಿ.ರಾಮಮೂರ್ತಿ, ಮುಖ್ಯಸ್ಥ, ಪ್ರಧಾನ ವಿಜ್ಞಾನಿ, ರಾಷ್ಟ್ರೀಯ ಮಣ್ಣಿನ ಸಮೀಕ್ಷೆ, ಭೂ ಬಳಕೆ ಯೋಜನೆ ಬ್ಯೂರೋ

ಮಣ್ಣಿನ ಆಳಕ್ಕೆ ಮ್ಯಾಪ್ ಮಾಡಲಾಗಿದೆ. ಕೆಲ ಪ್ರದೇಶಗಳ ಭೌತಿಕ ಮಾಹಿತಿ ಪಡೆಯಲು ಸ್ಯಾಟ್‌ಲೈಟ್ ಚಿತ್ರಗಳ ಬಳಕೆಯೂ ಇದರಲ್ಲಿವೆ.

ನಿಮಗೂ ನಿಮ್ಮ ಪ್ರದೇಶದ ಡಿಜಿಟಲ್ ಸಾಯಿಲ್ ಮ್ಯಾಪಿಂಗ್ ಬೇಕೆಂದಿದ್ದಲ್ಲಿ, ರಾಷ್ಟ್ರೀಯ ಮಣ್ಣಿನ ಸಮೀಕ್ಷೆ ಮತ್ತು ಭೂ ಬಳಕೆ ಯೋಜನೆ ಬ್ಯೂರೋವನ್ನು ಸಂಪರ್ಕಿಸಬಹುದು. ಈಗಾಗಲೇ ರಾಜ್ಯದ ಮಣ್ಣುಗಳ ಮಾಹಿತಿಯ ಸಂಗ್ರಹ ಇರುವುದರಿಂದ ಶೀಘ್ರದಲ್ಲೇ ಮಾಹಿತಿ ನಿಮ್ಮ ಕೈ ಸೇರುತ್ತದೆ.

ಡಿಜಿಟಲ್ ಮ್ಯಾಪಿಂಗ್‌ನಿಂದ ಲಭ್ಯ ಮಾಹಿತಿ:

- ಉತ್ತರ ಕನ್ನಡ (ಶೇ.2.18)ಹಾಗೂ ದಕ್ಷಿಣ ಕನ್ನಡ (ಶೇ.2.01) ದ ಮಣ್ಣುಗಳ ಪಿ.ಎಚ್. ಮೌಲ್ಯವು ರಾಜ್ಯದಲ್ಲಿಯೇ ಅಧಿಕವಾಗಿದ್ದು ಚಿಕ್ಕಬಳ್ಳಾಪುರ (ಶೇ.0.42) ಮತ್ತು ವಿಜಯಪುರ (ಶೇ.0.46) ಜಿಲ್ಲೆಗಳ ಪಿ.ಎಚ್. ಮೌಲ್ಯವು ಕಡಿಮೆಯಾಗಿದೆ.
- ಮೇಲ್ಭಾಗದ ಮಣ್ಣಿನ ವಿನ್ಯಾಸ ವರ್ಗವನ್ನು ನಕ್ಷೆ ಮಾಡಲು ಆಯ್ದ ಅರಣ್ಯ ವರ್ಗೀಕರಣದ ಆಂಕಿ-ಅಂಶಗಳನ್ನು ಬಳಸಲಾಗಿದ್ದು, ರಾಜ್ಯದ ಶೇ.31.7ರಷ್ಟು ಪ್ರದೇಶವನ್ನು ಜೇಡಿಮಣ್ಣು ಶೇ.21.95ನ್ನು ಜೋಡಿ ಮಣ್ಣಿನ ಲೋಮ್, ಶೇ.16.50ನ್ನು ಮರಳು ಜೇಡಿ ಮಣ್ಣಿನ ಲೋಮ್ ಹಾಗೂ ಶೇ.14.84ರಲ್ಲಿ ಮರಳು ಮಿಶ್ರಿತ ಲೋಮ್ ಇದೆ.

Udayavani pg 07



ಆಳವಂಡಿ ಸಮೀಪದ ಬೆಳಗಟ್ಟ ಗ್ರಾಮದ ಯಶೋಧಾ ಚಿಲವಾಡಗಿ ತಮ್ಮ ಸ್ವಂತ ಜಮೀನಿನಲ್ಲಿ ಬೆಳೆದ ಅಬ್ಬಲಿಗೆ ಹೂವು ಬಿಡಿಸುತ್ತಿರುವುದು.

ಬರದ ನಾಡಿನ ಯಶಸ್ವಿ ಪುಷ್ಪೋದ್ಯಮಿ

ಬರದ ನಾಡಿನಲ್ಲಿ ಪುಷ್ಪೋದ್ಯಮ ಮಾಡಿ ಯಶಸ್ವಿಯಾದವರು ಕೊಪ್ಪಳ ಜಿಲ್ಲೆಯ ಬೆಳಗಟ್ಟ ಗ್ರಾಮದ ಯಶೋಧಾ ನಿಂಗಪ್ಪ ಚಿಲವಾಡಗಿ.

ಗೃಹಿಣಿಯಾಗಿದ್ದ ಯಶೋಧಾ, ತನ್ನ ವೈಯಕ್ತಿಕ ಜೀವನದಲ್ಲಿ ಯಶಸ್ಸು ಕಾಣದೇ ಇದ್ದಾಗ ಹೈನುಗಾರಿಕೆ ಮೂಲಕ ಸ್ವಾವಲಂಬನೆ ಜೀವನ ಸಾಗಿಸಲು ಪ್ರಾರಂಭಿಸಿದರು. ಕಳೆದ 10 ವರ್ಷಗಳಿಂದಲೂ ಹೈನುಗಾರಿಕೆ ನಡೆಸಿಕೊಂಡು ಬರುತ್ತಿದ್ದು, ಅದರಿಂದ ಬರುವ ಆದಾಯದಲ್ಲಿ ಜೀವನ ಸಾಗಿಸುತ್ತಿದ್ದಾರೆ. ಹೈನುಗಾರಿಕೆಯಿಂದ ಸ್ವಾವಲಂಬಿಯಾಗಿ ಸ್ವಾಭಿಮಾನದ ಬದುಕನ್ನು ಸಾಗಿಸಬಹುದು ಎಂಬುದು ಅವರ ಅಭಿಪ್ರಾಯ.

ಯಶೋಧಾ ಕೇವಲ ಹೈನುಗಾರಿಕೆ ಮಾತ್ರವಲ್ಲದೆ ಕೃಷಿಯಲ್ಲಿಯೂ ಆಸಕ್ತಿ ಹೊಂದಿದ್ದಾರೆ. ತಂದೆ ನಿಂಗಪ್ಪ

> ನಾನು ಐದು ಜೆರ್ಸಿ ಆಕಳು ಹಾಗೂ ನಾಲ್ಕು ಜವಾರಿ ಎಮ್ಮೆ ಸಾಕಿದ್ದೇನೆ. ಆಕಳು-ಎಮ್ಮೆಗಳಿಗೆ ಮೇವು, ಹುಲ್ಲು ಹಾಗೂ ನೀರು ಕುಡಿಸುವುದು ಸೇರಿದಂತೆ ಅವುಗಳ ಪಾಲನೆ-ಪೋಷಣೆಯನ್ನು ನಾನೇ ಮಾಡುತ್ತೇನೆ. ಈ ಎಲ್ಲ ಜಾನುವಾರುಗಳಿಂದ ಪ್ರತಿದಿನ ಅಂದಾಜು 30ರಿಂದ 40 ಲೀಟರ್ ಹಾಲು ಪಡೆಯುತ್ತೇನೆ. ಹಾಲನ್ನು ನಮ್ಮೂರಲ್ಲೇ ಇರುವ ಹಾಲಿನ ಕೇಂದ್ರಕ್ಕೆ ನೀಡುತ್ತೇನೆ. ಇದರಿಂದ ತಿಂಗಳಿಗೆ 35ರಿಂದ 40 ಸಾವಿರ ಆದಾಯ ಗಳಿಸಬಹುದು. ನನ್ನ ಸ್ವಾವಲಂಬಿ ಹಾಗೂ ಸ್ವಾಭಿಮಾನದ ಜೀವನಕ್ಕೆ ಹೈನುಗಾರಿಕೆ ಆಸರೆಯಾಗಿದೆ.
> ▪ ಯಶೋಧಾ ಚಿಲವಾಡಗಿ, ಬೆಳಗಟ್ಟ

ಚಿಲವಾಡಗಿ ಅವರ ನಿರಂತರ ಪ್ರೋತ್ಸಾಹ ಹಾಗೂ ಕುಟುಂಬ ಸದಸ್ಯರ ಸಹಾಯದಿಂದ ಸ್ಥಂತ ನೀರಾವರಿ ಜಮೀನಿನಲ್ಲಿನ ಎಲ್ಲ ಕೃಷಿ ಚಟುವಟಿಕೆಗಳಲ್ಲಿಯೂ ತೊಡಗಿಕೊಳ್ಳುತ್ತಾರೆ. ಪ್ರಸ್ತುತ ಜಮೀನಿನಲ್ಲಿ ಅಬ್ಬಲಿಗೆ (ಕನಕಾಂಬರ) ಹೂವುಗಳನ್ನು ಬೆಳೆದಿದ್ದು, ಹೂ ಬಿಡಿಸುವುದರಲ್ಲಿ ನಿರತರಾಗಿದ್ದಾರೆ.



ಯಶೋಧಾ ತಾನು ಸಾಕಿದ ಆಕಳುಗಳೊಂದಿಗೆ.

ಆದರೆ, ಹೂವಿನ ದರ ಕಡಿಮೆಯಾಗಿರುವುದರಿಂದ ಕೈಗೆ ಬಂದ ತುತ್ತು ಬಾಯಿಗೆ ಬರದಾಗಿದೆ ಎಂದು ಬೇಸರ ವ್ಯಕ್ತಪಡಿಸುತ್ತಿದ್ದಾರೆ. ಅಲ್ಪದೇ ಇದರೊಟ್ಟಿಗೆ ಕಳೆದ ಎರಡು ವರ್ಷಗಳಿಂದ ತೆಂಗಿನ ಗಿಡಗಳನ್ನು ನೆಟ್ಟು ಬೆಳೆಸುತ್ತಿದ್ದೇನೆ ಎನ್ನುತ್ತಾರೆ ಯಶೋಧಾ.

ಗೃಹಿಣಿಯೊಬ್ಬಳು ಮನಸ್ಸು ಮಾಡಿದರೆ ಯಾವ ರೀತಿ ಆದಾಯ ಗಳಿಸಬಹುದು ಎಂಬುದಕ್ಕೆ ಯಶೋಧಾ ಸಾಕ್ಷಿಯಾಗಿದ್ದಾರೆ. ಪುರುಷರಿಗಿಂತ ತಾನೇನೂ ಕಮ್ಮಿ ಇಲ್ಲ ಎಂಬುದನ್ನು ಸಾಬೀತುಪಡಿಸಿದ್ದಾರೆ.

▪ ಎನ್.ಎಂ. ಪಾಶೀಲ, ಅಳವಂಡಿ

ಹೈನುಗಾರಿಕೆಯಲ್ಲಿ ಶ್ರದ್ಧಾ ಛಾಪು

S-karnataka pg 05



ಆರ್ಥಿಕವಾಗಿ ಹಿಂದುಳಿದ ಮಹಾರಾಷ್ಟ್ರದ ಯುವತಿಯೊಬ್ಬರು ಹೈನುಗಾರಿಕೆ ಉದ್ಯಮದಿಂದ ಒಂದು ಕೋಟಿ ರೂ. ಆದಾಯ ಗಳಿಸುವ ಮೂಲಕ ಎಲ್ಲರ ಗಮನ ಸೆಳೆದಿದ್ದಾರೆ. ಅಹ್ಮದನಗರ ಜಿಲ್ಲೆಯ ನಿಘೋಜ್ ಗ್ರಾಮದ ಶ್ರದ್ಧಾ ಅವರ ಯಶೋಗಾಥೆ ಎಲ್ಲರಿಗೂ ಮಾದರಿ.

ಮಕ್ಕಳು ಸುಖದ ಸುಪ್ಪತ್ತಿಗೆಯಲ್ಲಿ ಬೆಳೆಯೋದಕ್ಕಿಂತ ಕಷ್ಟಗಳನ್ನು ಎದುರಿಸಿ ಬೆಳೆದಾಗ ಏನಾದರೂ ಸಾಧಿಸುತ್ತಾರೆ ಅನ್ನೋದು ಅನುಭವಸ್ಥರ ಮಾತು. ಹತ್ತವರ ಕಷ್ಟ ಮಕ್ಕಳಿಗೆ ಅರಿವಾದರೆ ಅವರಲ್ಲೂ ಸಾಧಿಸುವ ಛಲ ಹುಟ್ಟೋದು ಸಹಜ. ಅಂತೆಯೇ ಮಹಾರಾಷ್ಟ್ರದ ಆರ್ಥಿಕವಾಗಿ ಹಿಂದುಳಿದ ಯುವತಿಯೊಬ್ಬಳು ಹೈನುಗಾರಿಕೆ ಉದ್ಯಮದಿಂದ ಒಂದು ಕೋಟಿ ರೂ.ಆದಾಯ ಗಳಿಸುವ ಮೂಲಕ ಎಲ್ಲರ ಗಮನ ಸೆಳೆದಿದ್ದಾರೆ. ಅವರೇ 'ಶ್ರದ್ಧಾ ಫಾರ್ಮ್'ನ ಮಾಲಕಿ ಶ್ರದ್ಧಾ ಧವನ್.

ಮಹಾರಾಷ್ಟ್ರದ ಅಹ್ಮದನಗರ ಜಿಲ್ಲೆಯ ನಿಘೋಜ್ ಗ್ರಾಮದವರಾದ ಶ್ರದ್ಧಾ ಕಡುಬಡತನದಲ್ಲೇ ಬೆಳೆದರು. ಅವರ ತಂದೆ ಸತ್ಯವಾನ್ ದೈಹಿಕ ನ್ಯೂನತೆಯಿಂದ ಬಳಲುತ್ತಿದ್ದರು. ಹೀಗಾಗಿ ಶ್ರದ್ಧಾ ತಂದೆಯ ಕೆಲಸದಲ್ಲಿ ಪಾಲ್ಗೊಂಡು, ಎಮ್ಮೆಗಳನ್ನು ಮೇಯಿಸುವದು ಮತ್ತು ಹಾಲು ಕರೆಯುವದರಲ್ಲಿ



ನಿರತಳಾಗುತ್ತಿದ್ದಳು. ಅವಳು 13–14ನೆಯ ವಯಸ್ಸಿನಲ್ಲಿಯೇ ಎಮ್ಮೆಗೆ ಯಾವ ಆಹಾರ ನೀಡಬೇಕು. ಹಾಲು ಮಾರಾಟ ಸಮಯದಲ್ಲಿ ಗ್ರಾಹಕರ ಜೊತೆಗೆ ಸಂಭಾಷಣೆ, ಎಮ್ಮೆಗಳ ಪೋಷಣೆ ಮುಂತಾದ ವಿಷಯಗಳಲ್ಲಿ ಪರಿಣತಿ ಹೊಂದಿದಳು. ಎಮ್ಮೆಗಳ ಪಾಲನೆ ಪೋಷಣೆಯೊಂದಿಗೆ ಶಿಕ್ಷಣವನ್ನು ಮುಂದುವರೆಸಿದಳು. ಚಿಕ್ಕವಯಸ್ಸಿನಲ್ಲಿಯೇ ಶ್ರದ್ಧಾ ಬೈಕ್, ಕಾರು, ಟಿಂಪೋ ಓಡಿಸುವದನ್ನು ಕಲಿತಿದ್ದರು. 2022ರಲ್ಲಿ ಭೌತಶಾಸ್ತ್ರದಲ್ಲಿ ಎಂ.ಎಸ್ಸಿ. ಪೂರ್ಣಗೊಳಿಸಿದರು. ಆದರೆ ಶ್ರದ್ಧಾ ಬೇರೆ ಯಾವ ಉದ್ಯೋಗವನ್ನು ಕೂಡ ಅರಸಿ ಹೋಗದೆ ತಂದೆಯ ಎಮ್ಮೆ ಸಾಕಾಣಿಕೆ, ಮಾರಾಟ ಹಾಗೂ ಹಾಲು ಮಾರಾಟ ಉದ್ಯಮವನ್ನೇ ಬೆಳೆಸುವ ನಿರ್ಧಾರ ಕೈಗೊಂಡರು.

ಎರಡು ಎಮ್ಮೆಯಿಂದ ಆರಂಭ

ಪ್ರಾರಂಭದಲ್ಲಿ ಅವರ ತಂದೆ ಕೇವಲ 2 ಎಮ್ಮೆಗಳನ್ನು ಸಾಕಿದ್ದರು. ಶ್ರದ್ಧಾ ತನ್ನ ತಂದೆಯೊಂದಿಗೆ ಹೈನುಗಾರಿಕೆಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡರು. ಅವರ ತಂದೆ ಎಮ್ಮೆಗಳ ಮಾರಾಟಕ್ಕೆ ಹೆಚ್ಚಿನ ಒತ್ತು ನೀಡುತ್ತಿದ್ದರು. ಆದರೆ ಶ್ರದ್ಧಾ ಇದನ್ನು 'ಡೈರಿ ಫಾರ್ಮ' ಆಗಿ ಬದಲಾಯಿಸಿದರು. ಲಾಭದ ಹಣವನ್ನು ಬೇರೆ ಎಲ್ಲೂ ಬಳಸದೇ ಮತ್ತೇ ಉದ್ಯಮದಲ್ಲಿ ತೊಡಗಿಸಿದ ಕಾರಣ ಶ್ರದ್ಧಾಗೆ ಸಾಲ ಮಾಡುವ ಅನಿವಾರ್ಯತೆ ಎದುರಾಗಲಿಲ್ಲ. 2016ರಲ್ಲಿ ಎಮ್ಮೆಗಳಿಗಾಗಿ ದೊಡ್ಡ ಶೆಡ್ ನಿರ್ಮಿಸಿದರು. 2017ರಲ್ಲಿ ಎಮ್ಮೆಗಳ ಸಂಖ್ಯೆ 45ಕ್ಕೆ ಏರಿಕೆಯಾಯಿತು. ನಂತರ ಶ್ರದ್ಧಾ ಹಾಲಿನ ಗುಣಮಟ್ಟ ಹೆಚ್ಚಿಸುವ ಕಡೆಗೆ ಗಮನ ನೀಡಿದರು. ಅವರು ಎಮ್ಮೆಗಳಿಗೆ ಹತ್ತಿ ಬೀಜದ ಹಿಂಡಿ, ಜೋಳದ ನುಚ್ಚು ಹಾಗೂ ಮೆಂತೆ ಹುಲ್ಲು ಸೇರಿದಂತೆ ಪೌಷ್ಟಿಕಾಂಶಯುಕ್ತ ಆಹಾರಗಳನ್ನು ನೀಡಲು ಪ್ರಾರಂಭಿಸಿದರು. ಇದರಿಂದ ಹಾಲಿನ ಗುಣಮಟ್ಟ ಹೆಚ್ಚಾಗಿ, ಮಾರುಕಟ್ಟೆಯಲ್ಲಿ ಬೇಡಿಕೆ ಇಮ್ಮಡಿಯಾಯಿತು.

ದೊಡ್ಡ ಫಾರ್ಮ್

ಮಹಾರಾಷ್ಟ್ರದ ನಿಘೋಜ್ ಗ್ರಾಮದಲ್ಲಿರುವ ಶ್ರದ್ಧಾ ಫಾರ್ಮ ಇಂದು ದೊಡ್ಡ ಮಟ್ಟದಲ್ಲಿ ಬೆಳೆದು ನಿಂತಿದೆ. ಈಗ ಶ್ರದ್ಧಾ ಫಾರ್ಮನಲ್ಲಿ 130 ಎಮ್ಮೆಗಳಿವೆ. ಅವರು ವರ್ಮಿ ಕಾಂಪೋಸ್ಟ್ ಗೊಬ್ಬರ ತಯಾರಿಕೆಯನ್ನು ಪ್ರಾರಂಭಿಸಿದರು. ಪ್ರತಿ ತಿಂಗಳು ಅಂದಾಜು 30 ಸಾವಿರ ಕೆ.ಜಿ. ಕಾಂಪೋಸ್ಟ್ ಗೊಬ್ಬರ ಸಿದ್ಧಪಡಿಸಿ, ಸಿಎಸ್ ಅಗ್ರೋ ಆರ್ಗಾನಿಕ್ಸ್ ಎಂಬ ಹೆಸರಿನಲ್ಲಿ ಮಾರಾಟ ಮಾಡತೊಡಗಿದರು. ಅವರು ತಯಾರಿಸಿದ ಸಾವಯವ ಗೊಬ್ಬರ ಮಹಾರಾಷ್ಟ್ರ ಸರ್ಕಾರದಿಂದ ಮಾನ್ಯತೆ ಪಡೆದಿದೆ. ಇದಲ್ಲದೇ ಶ್ರದ್ಧಾ ಅವರು ಜೈವಿಕ ಅನಿಲ ಘಟಕವನ್ನು ಸ್ಥಾಪಿಸಿದರು. ಫಾರ್ಮನಲ್ಲಿರುವ ಎಲ್ಲಾ ವಿದ್ಯುತ್ ಉಪಕರಣಗಳಿಗೆ ಜೈವಿಕ ಅನಿಲ ಘಟಕ ಉತ್ಪಾದಿಸುವ ವಿದ್ಯುತ್ ಬಳಸಿಕೊಳ್ಳಲಾಗುತ್ತದೆ. ಗ್ರಾಮದಲ್ಲಿ ವಿದ್ಯುತ್ ಪೂರೈಕೆ ಅಸಮರ್ಪಕವಾಗಿರುವದರಿಂದ ಅವರು ಜೈವಿಕ ಅನಿಲದ ಮೂಲಕ ಯಶಸ್ವಿಯಾಗಿ ಕೆಲಸ ನಿರ್ವಹಿಸುತ್ತಾರೆ.

ಎಮ್ಮೆ ಹಾಲಿನಿಂದ ಬೆಣ್ಣೆ, ತುಪ್ಪ, ಪನೀರ್, ಲಸ್ಸಿ, ಮೊಸರು, ಮಜ್ಜಿಗೆಗಳಂತಹ ವೈವಿಧ್ಯಮಯ ಡೈರಿ ಉತ್ಪನ್ನಗಳನ್ನು ತಯಾರಿಸಿ ಯಶಸ್ಸನ್ನು ಕಂಡುಕೊಂಡಿದ್ದಾರೆ. ಅವರು ಡೈರಿ ಉದ್ಯಮದಲ್ಲಿ ಆಸಕ್ತಿ ಹೊಂದಿದವರಿಗೆ ಆನ್‌ಲೈನ್, ಆಫ್‌ಲೈನ್ ತರಬೇತಿಗಳನ್ನು ನೀಡುತ್ತಾರೆ. ಕಳೆದ ಆರ್ಥಿಕ ಸಾಲಿನಲ್ಲಿ ಶ್ರದ್ಧಾ ಅವರು ಡೈರಿ ಫಾರ್ಮ ಕಂಪೋಸ್ಟ್ ಗೊಬ್ಬರ ಹಾಗೂ ತರಬೇತಿ ನೀಡುವದರ ಮೂಲಕ ಒಟ್ಟು 1 ಕೋಟಿ ರೂಪಾಯಿ ಆದಾಯ ಗಳಿಸಿದ್ದಾರೆ. ಸತತ ಪರಿಶ್ರಮ, ಬದ್ಧತೆ ಹಾಗೂ ಸೂಕ್ತ ಯೋಜನೆಗಳ ಮೂಲಕ ಗ್ರಾಮೀಣ ಪರಿಸರದ ಯುವತಿ ಶ್ರದ್ಧಾ ವಿದ್ಯಾರ್ಹತೆಗೆ ತಕ್ಕ ಉದ್ಯೋಗ ಸಿಕ್ಕಿಲ್ಲ ಎಂದು ದೂರುವವರಿಗೆ ಮಾದರಿಯಾಗಿದ್ದಾರೆ.

▪ ಸುರೇಶ ಗುದಗನವರ | ಧಾರವಾಡ

ಆಂಧ್ರಪ್ರದೇಶದ ಬೆಳೆಗಾರರಿಗೆ ಎಂಐಎಸ್ ವರದಾನ

ಮೆಣಸಿನಕಾಯಿ ಬೆಲೆ ಚೇತರಿಕೆ

ವಿಜಯವಾಡ (ಪಿಟಿಐ): ಆಂಧ್ರಪ್ರದೇಶದಲ್ಲಿ ಜಾರಿಗೊಂಡಿರುವ ಮಾರುಕಟ್ಟೆ ಮಧ್ಯಪ್ರವೇಶ ಯೋಜನೆಯಿಂದ (ಎಂಐಎಸ್) ಒಣಮೆಣಸಿನಕಾಯಿ ಬೆಲೆಯು ಚೇತರಿಕೆ ಕಂಡಿದೆ. ಮುಕ್ತ ಮಾರುಕಟ್ಟೆಯಲ್ಲಿ ಬೆಲೆ ಏರಿಕೆಯಾಗಿದ್ದು, ಬೆಳೆಗಾರರಿಗೆ ವರದಾನವಾಗಿದೆ.

ಕಳೆದ ವರ್ಷದ ಇದೇ ಅವಧಿಯಲ್ಲಿ ಕ್ವಿಂಟಲ್‌ಗೆ ₹27 ಸಾವಿರ ಇದ್ದ ದರವು ₹7 ಸಾವಿರಕ್ಕೆ ಕುಸಿದಿತ್ತು. ಬೆಲೆ ಕುಸಿತದಿಂದ ರಾಯಲಸೀಮೆ, ಗುಂಟೂರು ಮತ್ತು ಪಲ್ನಾಡು ಭಾಗದ ಸಾವಿರಾರು ಹೆಕ್ಟೇರ್‌ನಲ್ಲಿ ಮೆಣಸಿನಕಾಯಿ ಬೆಳೆದಿದ್ದ ರೈತರು ಸಂಕಷ್ಟಕ್ಕೆ ಸಿಲುಕಿದ್ದರು.



ರೈತರ ಹಿತದೃಷ್ಟಿಯಿಂದ ಮಾರುಕಟ್ಟೆ ಮಧ್ಯಪ್ರವೇಶ ಯೋಜನೆಯಡಿ ಬೆಲೆ ಕೊರತೆ ಪಾವತಿ ಸೌಲಭ್ಯ ಕಲ್ಪಿಸುವಂತೆ ಆಂಧ್ರಪ್ರದೇಶದ ಸರ್ಕಾರವು, ಕೇಂದ್ರಕ್ಕೆ ಮನವಿ ಸಲ್ಲಿಸಿತ್ತು. ಕೇಂದ್ರ ಮತ್ತು ರಾಜ್ಯ ಸರ್ಕಾರದಿಂದ ಜಂಟಿಯಾಗಿ ಫೆಬ್ರುವರಿ 25ರಂದು ಯೋಜನೆಯನ್ನು ಅನುಷ್ಠಾನಗೊಳಿಸಿದ್ದು, ಒಣಮೆಣಸಿನಕಾಯಿ ಖರೀದಿ ಪ್ರಕ್ರಿಯೆ ಆರಂಭಿಸಲಾಗಿದೆ.

ಪ್ರತಿ ಕ್ವಿಂಟಲ್‌ಗೆ ₹11,781 ಕನಿಷ್ಠ ಮಧ್ಯಸ್ಥಿಕೆ ಬೆಲೆ ನಿಗದಿಪಡಿಸಲಾಗಿದೆ. ರಾಜ್ಯದ ಒಟ್ಟು ಉತ್ಪಾದನೆ ಪೈಕಿ ಶೇ 25ರಷ್ಟು ಒಣಮೆಣಸಿನಕಾಯಿ ಖರೀದಿಗೆ ಕೇಂದ್ರವು ಒಪ್ಪಿದೆ.

ಎಷ್ಟು ಬೆಲೆ ಏರಿಕೆ?: ಸರ್ಕಾರ ಖರೀದಿ ಆರಂಭಿಸಿದ ಬೆನ್ನಲ್ಲೇ ಮುಕ್ತ ಮಾರುಕಟ್ಟೆಯಲ್ಲಿ ಬೆಲೆಯು ಶೇ 15ರಿಂದ ಶೇ 20ರಷ್ಟು ಹೆಚ್ಚಳವಾಗಿದೆ. ಪ್